**ಪ್ರಥಮ ದರ್ಜೆ ನ್ಯಾಯಿಕಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು**

**ಸಿಸಿ ಸಂಖ್ಯೆ:132/2019**

| | |
|---|---|
| ಫ್ರಾಸಾ | 03 |
| ಚಾಸಾ | 03 |

ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 12.12.2022

| | | |
|---|---|---|
| ಸಾಕ್ಷಿಯ ಹೆಸರು | : | ಕೆ ನಾಗರಾಜ |
| ತಂದೆಯ ಹೆಸರು | : | ಲೇಟ್ ಕೃಷ್ಣಯ್ಯ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಲ್ಲೂಡಿ |

**ಮುಖ್ಯ ವಿಚಾರಣೆ : ಎಪಿಪಿರವರಿಂದಃ**

ಸಾಕ್ಷಿಯು ನಿಪಿ 2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ 2(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಸದರಿ ಸಹಿಯನ್ನು ಠಾಣೆಯಲ್ಲಿ ಮಾಡಿರುವುದಾಗಿ ನುಡಿಯುತ್ತಾರೆ. ಸದರಿ ನಿಪಿ 2 ಕ್ಕೆ ಫ್ರಾಸಾ-1 ಹಾಗೂ ಚಾಸಾ-4 ರವರು ಸಹ ಸಹಿ ಮಾಡಿರುವುದಾಗಿ ನುಡಿಯುತ್ತಾರೆ. ಸ್ಥಳದಿಂದ ಯಾವುದೇ ವಾಹನಗಳನ್ನು ಪೊಲೀಸರು ವಶಪಡಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಛಾಯಾಚಿತ್ರಗಳನ್ನು ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿಯವರು ಅನುಮತಿಯನ್ನು ಕೋರಿದ್ದು ನೀಡಲಾಯಿತು).**

**ಪಾಟೀ ಸವಾಲುಃ ಎಪಿಪಿ ರವರಿಂದಃ**

ದಿನಾಂಕ 01.12.2018 ರಂದು ಚಿಕ್ಕಕುರುಗೋಡು ಗ್ರಾಮದ ಗಿಡ್ಡಪ್ಪಗಾರಿ ಬಾಲಯ್ಯ ರವರ ಮನೆಯ ಮುಂದೆ ಹಾದುಹೋಗುವ ರಾಜ್ಯ ಹೆದ್ದಾರಿ – 9 ರ ಬಳಿ ಪ್ರಾಸಾ–1, ಚಾಸಾ–4 ಮತ್ತು ನನ್ನ ಸಮಕ್ಷಮ ಸಮಯ ಸುಮಾರು ಸಂಜೆ 05.30 ರಿಂದ 06.00 ಗಂಟೆಯವರೆವಿಗೂ ಪೊಲೀಸರು ಸ್ಥಳ ಪಂಚನಾಮೆ ಕ್ರಮ ಜರುಗಿಸಿದರು ಎಂದರೆ ಸರಿಯಲ್ಲ. ಅಪಘಾತಕ್ಕೆ ಹೀಡಾದ ದ್ವಿಚಕ್ರ ವಾಹನ ಸಂಖ್ಯೆ ಕೆಎ–40 ಕೆ–7422 ಮತ್ತು ಕಂಟ್ಯೈನರ್ ಲಾರಿ ಸಂಖ್ಯೆ ಆರ್.ಜೆ – 32 ಜೆ.ಸಿ 1224 ಸ್ಥಳದಿಂದ ಪೊಲೀಸರು ವಶಪಡಿಸಿಕೊಂಡರು ಎಂದರೆ ಸರಿಯಲ್ಲ.

**ಪಾಟೀಸವಾಲು : ಶ್ರೀ.ಕೆ.ಎಸ್.ಆರ್ ವಕೀಲರಿಂದ, ಆರೋಪಿ ಪರವಾಗಿಃ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇದೆ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗೌರಿಬಿದನೂರು